# ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗ್ಪುರ್

## ಹತ್ತಿ ಬೆಳೆಯಲು ಸಾಪ್ತಾಹಿಕ ಸಲಹೆ, 13-18 ಅಕ್ಟೋಬರ್, 2015 ರ ಅವಧಿಯಲ್ಲಿ

## (48 ನೇ ಪ್ರಮಾಣಿತ ವಾರ)

*"ಈ ಸಲಹೆಯು ಆಯಾ ರಾಜ್ಯಗಳ ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"*

### ಹವಾಮಾನ ಸಲಹೆ

| | ಅಕ್ಟೋಬರ್ ತಿಂಗಳಿನ ಮಳೆಯ ಪ್ರಮಾಣ (ಮಿ.ಮೀ.) | | | | | | ಸಲಹೆ |
|---|---|---|---|---|---|---|---|
| ದಿನಾಂಕ | 13 | 14 | 15 | 16 | 17 | 18 | |
| **ಕರ್ನಾಟಕ** | | | | | | | |
| ಧಾರವಾಡ | 6 | 4 | 0 | 0 | 0 | 0 | ಭಾರೀ ಮಳೆಯ ಸಂಧರ್ಭದಲ್ಲಿ ನೀರಿನ ಸ್ಥಗಿತವನ್ನು ತಪ್ಪಿಸಲು ನಿಂತ ನೀರನ್ನು ಒಳ ಚರಂಡಿ ಮೂಲಕ ಹರಿಸಬೇಕು, ಇದರಿಂದ ಬೀಜಕೋಶ ಬೀಳುವಿಕೆಯನ್ನು ತಪ್ಪಿಸಬಹುದು ಮತ್ತು ಇಂತಹ ಸಮಯದಲ್ಲಿ ಒಂದು ಎಕರೆಗೆ 25 ಕೆ ಜಿ ಯೂರಿಯ ಒದಗಿಸಬೇಕು. 100-110 ದಿನದ ಬೆಳೆಯಲ್ಲಿ ವಿಶೇಷವಾಗಿ ಎಚ್ X ಬಿ ಮಿಶ್ರತಳಿಗಳಲ್ಲಿ ಚಿಗುರಿನ ತುದಿಯನ್ನು ಕಿವುಚುವಂತೆ ಸೂಚಿಸಲಾಗಿದೆ ಮತ್ತು ಹತ್ತಿಯಲ್ಲಿ ಎಲೆ ಕೆಂಪಾಗುವಿಕೆ ಮತ್ತು ಮೊಗ್ಗು ಬೀಳುವಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು,1% 19:19:19 ಕರಗುವ ರಸಗೊಬ್ಬರದ ಜೊತೆ 1% $MgSO_4$ ಮತ್ತು ಪ್ಲನೊಫಿಕ್ಸ್ ಸಿಂಪಡಿಸಬೇಕು. ಬೇರು ಕೊಳೆಯುವ ರೋಗವು ಕೆಲವು ಭಾಗಗಳಲ್ಲಿ ಕಂಡುಬಂದಿದೆ ಇದನ್ನು ತಡೆಗಟ್ಟಲು 2 ಗ್ರಾಂ ವಿಟಾವಕ್ಸ್ ಪೌಡರ್ ನ್ನು ಒಂದು ಲೀಟರ್ ನೀರಿನಲ್ಲಿ ಬೆರಿಸಿ ಪೀಡಿತ ಸಸ್ಯಕ್ಕೆ ಮತ್ತು ಸುತ್ತಮುತ್ತಲಿನ ಸಸ್ಯಗಳಿಗೆ ಹಾಕಿ ನೆನೆಸಬೇಕು. ಮಿರಿಡ್ ಬಗ್ ಮತ್ತು ಮಿಡ್ಜ್ ನ್ನು ನಿಯಂತ್ರಿಸಲು ಪ್ರೋಫೆನೋಫೋಸ್, ಕ್ಲೋರ್ ಪೈರಿಫೋಸ್ ಅಥವಾ ಕ್ವಿನೊಲ್ಫೊಸ್ ನಿಂದ ನಿಯಂತ್ರಣ ಕ್ರಮಗಳನ್ನು ಆರಂಭಿಸಲು ಸೂಚಿಸಲಾಗಿದೆ. ಮೊಗ್ಗು ಬರುವಿಕೆ ಮತ್ತು ಬೀಜಕೋಶ ರಚನೆ ಹಂತದಲ್ಲಿ ಆಳವಾದ ಕಪ್ಪು ಮಣ್ಣು ನಲ್ಲಿ ಭಾರೀ ನೀರಾವರಿ ಮಾಡಬಾರದು. |
| ಹಾವೇರಿ | 6 | 10 | 0 | 0 | 0 | 0 | |
| ಮೈಸೂರ್ | 33 | 19 | 10 | 4 | 14 | 8 | |

| ಮಾದರಿ | | | | | |
|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | < 5 | 5-20 | 20-50 | 50-80 | > 80 |
| | (ಬಿಳಿ) | (ಹಸಿರು) | (ಹಳದಿ) | (ನೀಲಿ) | (ನೇರಳೆ) |